**ಓ ಎಸ್ ನಂಃ 194/2017**
**ಪಿ ಡಬ್ಲ್ಯೂ ಃ 1**

**ದಿಃ 29.08.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ 3 ಮತ್ತು 4 ಪರ ಶ್ರೀ ಎಂ ಎನ್ ವಕೀಲರಿಂದ :-**

ದಾವಾ ಆಸ್ತಿಗಳ ಖಾತೆಯು ನಾಗರಾಜು ರವರಿಗೆ ಯಾವ ವರ್ಷದಿಂದ ನಮೂದಗಿದೆ ಎಂದು 1974 ರಲ್ಲಿ ನನ್ನ ತಾತ ಮೃತ ಪಟ್ಟಿರುತ್ತಾರೆ ಆನಂತರ ದಾವಾ ಆಸ್ತಿಗಳ ಖಾತೆಗಳು ನಾಗರಾಜು ರವರ ಹೆಸರಿಗೆ ನಮೂದಾಗಿರುತ್ತದೆ. ಸದರಿ ದಾಖಲಾತಿಗಳನ್ನು ನಾವು 1974 ರಲ್ಲಿಯೇ ಪರಿಶೀಲನೆ ಮಾಡಿರುತ್ತೇವೆ. ನನ್ನ ತಾತ 1974 ರಲ್ಲಿ ಮರಣ ಹೊಂದಿದ ಬಗ್ಗೆ ನನ್ನ ಬಳಿ ದಾಖಲಾತಿ ಇದೆ. ಸದರಿ ದಾಖಲಾತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಪಂಚಾಯತಿ ವಿಭಾಗದ ಮೂಲಕ ಸರ್ವೆ ನಂ. 4 ರಲ್ಲಿ 2 ಎಕರೆ, ಸರ್ವೆ ನಂ. 14/1 ರಲ್ಲಿ 2 ಎಕರೆ 33 ಗುಂಟೆ, ಸರ್ವೆ ನಂ. 141/3 ರಲ್ಲಿ 2 ಎಕರೆ 17 ಗುಂಟೆ, ಸರ್ವೆ ನಂ. 15 ರಲ್ಲಿ 13 ಎಕರೆ 8 ಗುಂಟೆ, ಸರ್ವೆ ನಂ. 16/1 ಬಿ 1 ಎಕರೆ 37 ಗುಂಟೆ, ಸರ್ವೆ ನಂ. 5/2 ರಲ್ಲಿ 2 ಎಕರೆ 36 ಗುಂಟೆ, ಸರ್ವೆ ನಂ. 50/2 ರಲ್ಲಿ 8 ಗುಂಟೆ ಜಮೀನಿಗೆ ಸಂಬಂಧಪಟ್ಟಂತೆ ನಾಗರಾಜರವರ ಹೆಸರಿಗೆ ಖಾತೆ ಆಗಿತ್ತು ಎಂದರೆ ಸರಿ. ದಾವಾ ಐಟಂ ನಂ. 2, 3, 6, 7, 8, 16 ಮತ್ತು ಐಟಂ ನಂ. 4 ರಲ್ಲಿ 1 ಎಕರೆ 30 ಗುಂಟೆ ಜಮೀನಿಗೆ ಸಂಬಂಧಪಟ್ಟಂತೆ ತಮ್ಮ ತಾತನ ಹೆಸರಿನಲ್ಲಿ ಖಾತೆ ಆಗಿದೆ ಎಂದರೆ ಸರಿ. ಅದಾದ ನಂತರ ಸದರಿ ಸ್ವತ್ತಿನ ಖಾತೆಯು ನಾಗರಾಜುರವರ ಹೆಸರಿಗೆ ವರ್ಗಾವಣೆ ಆಗಿದೆ ಎಂದರೆ ಸರಿಯಲ್ಲ. ಶಿರಾದಲ್ಲಿ ನಮ್ಮ ತಾಯಿಯ ಹೆಸರಿಗೆ ನಮ್ಮ ತಾತನವರು ಒಂದು ಮನೆಯನ್ನು ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ. ಭಾಗದ ಬಾಬ್ತು ತಮ್ಮ ತಾಯಿಯವರಿಗೆ ರೂ. 1,00,000/- ಲಕ್ಷ ಹಣವನ್ನು ನಗದು ರೂಪದಲ್ಲಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಬೆಂಗಳೂರಿನ ಪದ್ಮನಾಭಾನಗರದಲ್ಲಿ ತಮ್ಮ ತಾತನ ಹೆಸರಿನಲ್ಲಿ ಒಂದು ಮನೆ ಇದೆ ಎಂದರೆ ಸಾಕ್ಷಿ ನಮ್ಮ ಚಿಕ್ಕಮ್ಮ ಹೆಸರಿನಲ್ಲಿದೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಸದರಿ ಮನೆಯನ್ನು ನನ್ನ ತಾತನವರೇ ನನ್ನ ಚಿಕ್ಕಮ್ಮನಿಗೆ ಕೊಟ್ಟಿರುತ್ತಾರೆ ಎಂದರೆ ಸರಿ. ನನ್ನ ಚಿಕ್ಕಮ್ಮನ ಹೆಸರು ಪುಟ್ಟಮ್ಮ, ಅವರು ಈ ದಾವೆಯಲ್ಲಿ 2 ನೇ ಪ್ರತಿವಾದಿ. 1 ನೇ ಪ್ರತಿವಾದಿಗೆ ತುಮಕೂರಿನಲ್ಲಿ ಒಂದು ಖಾಲಿ ನಿವೇಶನವನ್ನು ನೀಡಿದ್ದು ಅದರಲ್ಲಿ ಅವರು ಮನೆಯನ್ನು ಕಟ್ಟಿಸಿಕೊಂಡಿದ್ದಾರೆ ಸರಿ. ತಮ್ಮ ತಾತ ಮರಣ ಹೊಂದಿದ ನಂತರ ತಮ್ಮ ತಾಯಿ ಹಾಗೂ ಆಕೆಯ ಸಹೋದರ ಸಹೋದರಿಯರ ನಡುವೆ ವಿಭಾಗ ಆಗಿದ್ದು ತಮ್ಮ ತಾಯಿಯವರ ಹಿಸ್ಸಾ ಬಾಬ್ತು ಅವರಿಗೆ ರೂ. 1,00,000/- ಹಣವನ್ನು ನೀಡಿದ್ದಾರೆ ಎಂದರೆ ಸರಿಯಲ್ಲ. ನಾಗರಾಜುರವರ ಜೀವಿತಾವಧಿಯಲ್ಲಿ ದಾವಾ ಸ್ವತ್ತುಗಳನ್ನು

**ಪಿ ಡಬ್ಲ್ಯೂ ಃ 1**

ಅವರೇ ಅನುಭವಿಸುತ್ತಿದ್ದರು, ಅವರ ಮರಣದ ನಂತರ ಪ್ರತಿವಾದಿ 3 ಮತ್ತು 4 ರವರು ಅನುಭವಿಸುತ್ತಾ ಬಂದಿರುತ್ತಾರೆ ಎಂದರೆ ಸರಿ. ಸಾಕ್ಷಿ ಸ್ವತಃ ಮುಂದುವರೆದು ದಾವಾ ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿಯುತ್ತಾರೆ. ತಮ್ಮ ತಾತ 1974 ರಲ್ಲಿ ಮರಣ ಹೊಂದಿದ್ದಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ತಮಗೆ ಯಾವುದೇ ಭಾಗಾಂಶ ಇಲ್ಲ ಎಂದರೆ ಸರಿಯಲ್ಲ. 3 ಮತ್ತು 4 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ಈಗಾಗಲೇ ವಿಭಾಗ ಆಗಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**